# ಒಂದು ಮಗುವಿನ ಸಂಸಾರ ಸ್ವರ್ಗ ಸಮಾನವಾಗಲು
# ಉಚಿತ ಹಾಗು ಅನಾಯಾಸ ೭೦ ಪರಿಹಾರೋಪಾಯಗಳು

**ಹಸಿವು, ಜಲಕ್ಷಾಮ, ಅನಕ್ಷರತೆ, ಹೆಚ್ಚುತ್ತಿರುವ ಹಿಂಸಾಚಾರ, ಗಲಭೆಗಳು, ಅಸಂತೋಷ, ಸ್ಪರ್ಧೆ, ಪರಿಸರ ಮಾಲಿನ್ಯ, ಈ ಎಲ್ಲಾ ಅನಿಯಮಿತ ಸಮಸ್ಯೆಗಳ ಮೂಲ ಕಾರಣ ಹೆಚ್ಚುತ್ತಿರುವ ಜನಸಂಖ್ಯೆ. ಜನಸಂಖ್ಯಾ ನಿಯಂತ್ರಣ ಕೇವಲ ಸರ್ಕಾರಕ್ಕೆ ಮಾತ್ರ ಸೀಮಿತವಲ್ಲ. ಬದಲಾಗಿ ಸಮಾಜದ ಪ್ರತಿಯೊಬ್ಬ ನಾಗರಿಕನ ಆದ್ಯ ಜವಾಬ್ದಾರಿ. ಯಾವುದೇ ಕುಟುಂಬಕ್ಕೆ ಆರ್ಥಿಕ ಸದೃಢತೆ ಬಹಳ ಮುಖ್ಯ.**

**ಹೊಸಬಾಳಿನ ಹೊಸಿಲನು ಮೆಟ್ಟುವ ಹೊಸ ಜೋಡಿಯು ಒಂದು ಕುಟುಂಬಕ್ಕೆ ಒಂದೇ ಮಗು ಹೇಳಿಕೆಯನ್ನು ಅನುಸರಿಸುವಲ್ಲಿ ಸಹಾಯವಾಗುವ ಹಲವು ಚಿಂತನೆಗಳು.**

**ಒಂದು ಕುಟುಂಬಕ್ಕೆ ಒಂದೇ ಮಗು.......... ಮಗುವಿನ ಒಳಿತಿಗಾಗಿ..........**

ನಿಮ್ಮ ಇಚ್ಛೆಗನುಸಾರವಾಗಿ ನಿಮ್ಮ ಕನಸಿನ ಕೂಸನ್ನು ಎಲ್ಲಾ ಅನುಕೂಲತೆಗಳೊಂದಿಗೆ ಬೆಳಸಬಹುದು. *ಇಡೀ ಕುಟುಂಬದ ಒಟ್ಟು ಲಕ್ಷ್ಯ ಈ ಒಂದು ಮಗುವಿನ ಮೇಲಿದ್ದು ಮಗುವಿಗೆ ತಪ್ಪು ಹಾದಿ ಹಿಡಿಯುವುದು ತಪ್ಪಿಸಬಹುದು. *ದೈವವಶಾತ್ ತಂದೆ ಯಾ ತಾಯಿಗೇನಾದರು ಹೆಚ್ಚು ಕಡಿಮೆಯಾದಲ್ಲಿ ಉಳಿದೊಬ್ಬ ಪೋಷಕ ಮಗುವನ್ನು ಹೆಚ್ಚಿನ ಹೊರೆಯಿಲ್ಲದೆ ಸಾಕಿ ಸಲಹಬಹುದು. *ಒಂದು ಪಕ್ಷ ಇಬ್ಬರು ಪೋಷಕರು ಇಲ್ಲದಿದ್ದಲ್ಲಿ, ಒಂದೇ ಮಗುವಾದ್ದರಿಂದ ಕುಟುಂಬದ ಯಾವುದೇ ಸದಸ್ಯರು ಮಗುವಿನ ಹೊಣೆ ಹೊರಬಹುದು. *ಕಾಲೇಜುಗಳಲ್ಲಿ ಸ್ಥಳ ಕಾಯ್ದಿರಿಸುವಿಕೆಯಾಗಲೀ, ಉದ್ಯೋಗಗಳಲ್ಲಿ ಬೇರೆ ಬೇರೆ ಪಂಗಡದವರಿಗೆ ಕಾಯ್ದಿರಿಸುವುದಾಗಲೀ ಇರುವುದಿಲ್ಲ. ಏಕೆಂದರೆ ಕಡಿಮೆ ಜನಸಂಖ್ಯೆಯಿಂದಾಗಿ ಎಲ್ಲರಿಗೂ ಸಮಾನ ಹಾಗೂ ಸಾಕಷ್ಟು ಅವಕಾಶಗಳು ಲಭ್ಯವಾಗುತ್ತವೆ. ನಿರುದ್ಯೋಗ ಸಮಸ್ಯೆಯಂತೂ ಇರುವುದೇಇಲ್ಲ. *ಒಂದು ವೇಳೆ ಉತ್ತಮ ಉದ್ಯೋಗ ಸಿಗದಿದ್ದಲ್ಲಿ ಒಂದು ಮಗು ತನ್ನ ಕುಲಕಸುಬನ್ನು ಅನುಸರಿಸಬಹುದು. *ಅರ್ಹ ಒಂದು ಮಗುವು ಮುಂದೆ ದೊಡ್ಡವನಾಗಿ ಮದುವೆ ವಯಸ್ಸಿಗೆ ಬಂದಾಗ ಅವಕಾಶಗಳು ಕೈ ಬೀಸಿ ಕರೆಯಬಹುದು. *ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿವಹಿಸುವುದರಿಂದಾಗಿ ಮಕ್ಕಳ ಸಾವಿನ ಸಂಖ್ಯೆಯಲ್ಲಿ ತೀವ್ರ ಕುಸಿತ ಕಂಡು ಬರುತ್ತದೆ. ಸಾಧಾರಣ ಬುದ್ಧಿಮಟ್ಟದ ಮಗುವನ್ನು ತಂದೆ ತಾಯಂದಿರು ನಿರ್ಲಕ್ಷ್ಯ ಮಾಡುವ ಪ್ರಸಂಗವಂತೂ ಖಂಡಿತ ಉದ್ಭವಿಸದು.

**ಪೋಷಕರ ಒಳಿತಿಗಾಗಿ :** *ನಿಮ್ಮ ವೃದ್ಧಾಪ್ಯದಲ್ಲಿ ನಿಮಗಿರುವುದು ಒಂದೇ ಮಗುವಾದ್ದರಿಂದ ನಿಮ್ಮನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಸಂಪೂರ್ಣವಾಗಿ ತನ್ನದೆಂದು ಭಾವಿಸಿ ಪೋಷಿಸುತ್ತಾನೆ/ಳೆ. *ವೃದ್ಧಾಪ್ಯ ಜೀವನವು ಸುಭದ್ರ ಹಾಗು ಸುಖಕರವಾಗಿರುತ್ತದೆ. *ಆಕಸ್ಮಾತ್ ವೈವಾಹಿಕ ಜೀವನದಲ್ಲಿ ಅಪಸ್ವರ ಮೂಡಿ, ದಂಪತಿಗಳು ವಿಚ್ಛೇದನೆ ಬಯಸಿದರೂ, ಇಬ್ಬರು ತಮ್ಮ ಪ್ರೀತಿಪಾತ್ರವಾದ ಒಂದು ಮಗುವಿನ ಜೊತೆ ಇರಲು ಇಚ್ಛಿಸುವುದರಿಂದ ವಿವಾಹ ವಿಚ್ಛೇದನೆಯ ಸಂಭವ ಕಡಿಮೆಯಾಗಿ ಸಂಸಾರ ಸುಖಕರವಾಗುವುದರಲ್ಲಿ ಸಂದೇಹವೇ ಇಲ್ಲ. ವಿಚ್ಛೇದಿತ ದಂಪತಿಗಳು ಕೂಡ ತಮ್ಮ ಒಂದು ಮಗುವಿಗಾಗಿ ಒಂದುಗೂಡಬಹುದು.

**ತಂದೆಯ ಒಳಿತಿಗಾಗಿ :** *ನೀವು ನಿಮ್ಮ ಅರ್ಧಾಂಗಿಯ ಇಚ್ಛೆಗಳನ್ನು ಪೂರೈಸಬಹುದು. *ಜೀವನ ಜವಾಬ್ದಾರಿಗಳಿಂದ ಆದಷ್ಟು ಬೇಗ ಮುಕ್ತರಾಗಿ ನಿಮ್ಮ ನಿವೃತ್ತ ಜೀವನವನ್ನು ಸಮಾಜ ಸೇವೆಗೆ ವಿನಿಯೋಗಿಸಬಹುದು.

**ತಾಯಿಯ ಒಳಿತಿಗಾಗಿ :** *ಇರುವುದು ಒಂದೇ ಮಗುವಾದ್ದರಿಂದ ಗೃಹಿಣಿಗೆ ಹೆಚ್ಚಿನ ಗೃಹಕೃತ್ಯಗಳು ಇರುವುದಿಲ್ಲ. *ಸಮಯದ ಉಳಿತಾಯವಾಗಿ ತಾಯಿ ತಾನು ಯಾವುದಾದರೊಂದು ಉದ್ಯೋಗ ಸಂಪಾದಿಸಿ ಆರ್ಥಿಕ ಸ್ವಾತಂತ್ರ್ಯತೆ ಗಳಿಸಬಹುದು ಅಥವ ಕುಟುಂಬದ ಆರ್ಥಿಕ ಸಮಸ್ಯೆಗಳಲ್ಲಿ ಪತಿಗೆ ಸಹಾಯ ಮಾಡಬಹುದು. *'ಮನೆಗೆ ಒಂದೇ ಮಗು' ಧೋರಣೆಯಿಂದ ಹೆಣ್ಣು ಮಕ್ಕಳಿಗೂ ಸಮಾನ ಆಸ್ತಿಯ ಹಕ್ಕು ತಾನೇತಾನಾಗಿ ದೊರಕುತ್ತದೆ. *ಒಂದೇ ಬಾರಿ ಗರ್ಭಧಾರಣೆಯಿಂದ ತಾಯಿಯ ಆರೋಗ್ಯದಲ್ಲಿ ಗಣನೀಯ ಸುಧಾರಣೆ ಕಾಣುತ್ತದೆ. ಸಹಿಸಲು ಅಸಾಧ್ಯವಾದ ಪ್ರಸವವೇದನೆಯನ್ನು ಮತ್ತೆ ಸಹಿಸುವ ಪ್ರಮೇಯವೇ ಇಲ್ಲ. *ಒಂದೇ ಒಂದು ಬಾರಿ ಗರ್ಭಧರಿಸುವುದರಿಂದ ಹೆಣ್ಣಿಗೆ ಕುಟುಂಬದ ಎಲ್ಲ ಸದಸ್ಯರ ಪ್ರೀತಿ-ಆದರಗಳು ದೊರೆತು, ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವುದರಿಂದ ಗರ್ಭಸ್ರಾವವಾಗಲೀ, ಗರ್ಭಾವಧಿಯ ಸಾವಾಗಲೀ ಸಂಭವಿಸುವುದು ನಿಸ್ಸಂದೇಹವಾಗಿ ಕಡಿಮೆಯಾಗುತ್ತದೆ.

**ಕುಟುಂಬದ ಒಳಿತಿಗಾಗಿ :** *ನಿಮ್ಮ ಕುಟುಂಬಕ್ಕೆ ಹಸಿವಿನ ಬಾಧೆ ಎಂದಿಗೂ ತಟ್ಟದು. *ನಿಮ್ಮ ಪೀಳಿಗೆಗೆ ಅನಕ್ಷರತೆಯ ಭೂತ ಎಂದಿಗೂ ಕಾಡಿಸದು. ಇಂದಿನ ಜಲಸಂಪನ್ಮೂಲ ಕೊರತೆಯ ಪರಿಸ್ಥಿತಿಯಲ್ಲಿ, ಜನ ಸಂಖ್ಯೆ ಕಡಿಮೆಯಾಗಿ ನೀರಿನ ಸಮಸ್ಯೆ ಎಂದಿಗೂ ಎದುರಾಗುವುದಿಲ್ಲ. *ಸಂಸಾರದಲ್ಲಿ ಪ್ರತಿಯೊಬ್ಬರಿಗೂ ಏಕಾಂತ, ವಿಶ್ರಾಂತಿ ಮತ್ತು ಮಾನಸಿಕ ನೆಮ್ಮದಿ ದೊರೆಯುತ್ತದೆ. *ಚಿಕ್ಕ ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಸುಲಲಿತ ಹಾಗೂ ಸಂತೋಷಭರಿತ ಜೀವನದ ಕನಸನ್ನು ನನಸಾಗಿಸಿಕೊಳ್ಳಬಹುದು. *ಪೋಷಕರು ತಮ್ಮ ಜವಾಬ್ದಾರಿಗಳಿಂದ ಬೇಗನೇ ವಿಮುಕ್ತರಾಗಬಹುದು. *ಒಳ-ಜಗಳಗಳು, ಆತಂಕಗಳು ಇಲ್ಲವಾಗಿ ಕುಟುಂಬದ ಸದಸ್ಯರು ದೀರ್ಘ ಹಾಗೂ ಶಾಂತ ಜೀವನವನ್ನು ನಡೆಸಬಹುದು. *ಚಿಕ್ಕ ಸಂಸಾರ-ಸುಖೀ ಸಂಸಾರ – ಸಿಹಿ ಸಂಸಾರ, ಏಕೆಂದರೆ ಚಿಕ್ಕ ಕುಟುಂಬದಲ್ಲಿ ಕುಟುಂಬ ಕಲಹ, ಚಿಂತೆ, ಒತ್ತಡ ಹಾಗೂ ತೊಂದರೆಗಳು ಕಡಿಮೆ, ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳನ್ನು ಒಂದು ಮಗು ಇರುವ ಕುಟುಂಬಗಳಿಸುವುದರಲ್ಲಿ ಸಂದೇಹವೇ ಇಲ್ಲ. *ಆಕಸ್ಮಾತ್ ಏನಾದರೂ ಅನಾಹುತ ಸಂಭವಿಸಿದಲ್ಲಿ, ಪತಿ/ಪತ್ನಿ ಒಂಟಿಯಾದಲ್ಲಿ ಇರುವುದು ಒಂದೇ ಮಗುವಾದ್ದರಿಂದ ಪುನರ್ವಿವಾಹವಾಗಿ ಹೊಸಜೀವನ ಆರಂಭಿಸಬಹುದು. *ವಿಧಿವಶಾತ್ ಮಗು ಅನಾಥವಾದಲ್ಲಿ, ಕುಟುಂಬದ ಯಾವುದೇ ಸದಸ್ಯ ಹೆಚ್ಚು ಹೊರೆಯಿಲ್ಲದೆ ಮಗುವಿನ ಜವಾಬ್ದಾರಿ ಹೊರಬಹುದು. *ವರದಕ್ಷಿಣೆ ಪಿಡುಗು ಕಡಿಮೆಯಾಗುವುದು ಖಂಡಿತ. *ವರದಕ್ಷಿಣೆ ಸಂಬಂಧಿತ ಕಲಹ, ಶೋಷಣೆ, ಸಾವು ಮತ್ತು ವಿವಾಹ ವಿಚ್ಛೇದನಗಳಂತಹ ಸಮಸ್ಯೆಗಳು ಕಡಿಮೆಯಾಗುತ್ತವೆ. ಅತ್ತೆ-ಸೊಸೆಯರ ಜಗಳಗಳಿಗೂ ಇದರಿಂದ ಸುಲಭ ಪರಿಹಾರ. ಎಲ್ಲರೂ ಅವಿಭಕ್ತ ಹಾಗೂ ಸುಖಮಯ ಕುಟುಂಬದಲ್ಲಿರಲು ಇಚ್ಛಿಸುತ್ತಾರೆ. ಹೆಚ್ಚು ಮಕ್ಕಳಿದ್ದರೆ ಇದು ಸಾಧ್ಯವಾಗುವುದಿಲ್ಲ. ಆದರೆ ಒಂದು ಮಗು ಇರುವ ಸಂಸಾರವಾದರೆ ಅವಿಭಕ್ತ ಕುಟುಂಬದಲ್ಲಿ ಇರಬಹುದು.

*ತಂದೆ-ತಾಯಿಯರ ಪ್ರೀತಿ-ವಾತ್ಸಲ್ಯವನ್ನು ಹೆಚ್ಚು ಪ್ರಮಾಣದಲ್ಲಿ ಪಡೆಯಬಹುದು. *ಬೇರೆಯವರಿಗೆ ಹೋಲಿಸಿದರೆ ನಿಮಗೆ ಜವಾಬ್ದಾರಿಗಳು ಕಡಿಮೆ ಇದ್ದು, ಆರ್ಥಿಕ ಮುಗ್ಗಟ್ಟು ಕಡಿಮೆಯಾಗಿ ಎಲ್ಲವನ್ನೂ ಸೂಸೂತ್ರವಾಗಿ ನಿಬಾಯಿಸಬಹುದು. *ಎಲ್ಲಿ ದೈಹಿಕ ಶಕ್ತಿಯು ಬೇಕೋ ಆ ಸಂದರ್ಭವನ್ನು ಹೊರತುಪಡಿಸಿ, ಇನ್ನುಳಿದಂತೆ ಎಲ್ಲಾ ರೀತಿಯಲ್ಲೂ ಒಂದು ಮಗುವಿನ ಕುಟುಂಬ ಸಮಾಜದ ಎಲ್ಲಾ ಅನುಕೂಲಗಳಿಗೂ, ಮನ್ನಣೆಗೂ ಪಾತ್ರವಾಗುತ್ತದೆ.

**ಸ್ಥಳಾವಕಾಶಕ್ಕಾಗಿ :** *ಚಿಕ್ಕ ಕುಟುಂಬಕ್ಕೆ ಚಿಕ್ಕ ವಸತಿ ಸಾಕು. ವಸತಿಗೆ ವೆಚ್ಚವಾಗುವ ಮೊತ್ತ ಕಡಿಮೆಯಾಗುವುದರಿಂದ, ನೀವು ನಿಮ್ಮ ಸ್ವಗೃಹವನ್ನು ಹೊಂದುವ ಯೋಜನೆಯನ್ನು ಬೇಗನೇ ಆರಂಭಿಸಬಹುದು. *ಒಂದೇ ಮಗುವಿರುವುದರಿಂದ ಒಂದು ಮನೆಗಿಂತ ಹೆಚ್ಚಿನ ಅವಶ್ಯಕತೆಯಿರುವುದಿಲ್ಲ. *ಒಂದು ಕುಟುಂಬಕ್ಕೆ - ಒಂದು ಮಗು: ಒಂದು ಮಗುವಿಗೆ - ಒಂದು ಮನೆ.

**ಆಸ್ತಿ ಸಂಬಂಧಿತ ವಿಚಾರಗಳಿಗಾಗಿ :** *ಏಕಮಾತ್ರ ವಾರಸುದಾರರಿರುವುದರಿಂದ ಆಸ್ತಿ ಪತ್ರದ ಗೊಡವೆಯೇ ಇರುವುದಿಲ್ಲ. *ಬ್ಯಾಂಕ್ ಖಾತೆ ಬಂಡವಾಳ ದಸ್ತಾವೇಜು ಮತ್ತು ಸಹಕಾರಿ ಕ್ರಯವಿಕ್ರಯಗಳ ಬಂಡವಾಳವನ್ನು ಜಂಟಿಯಾಗಿ ಹೊಂದುವುದರಿಂದ ಯಾರನ್ನೂ ನೋಂದಾಯಿಸುವ ಪ್ರಮೇಯವೇ ಇರುವುದಿಲ್ಲ. *ಯಾರಾದರು ಅಕಸ್ಮಾತ್ ದೈವಾಧೀನರಾದರೆ ಉಳಿದವರು ಬೇಕಿಲ್ಲದ ಕಾನೂನು ತಂಟೆ - ತಕರಾರು, ಸಮಯ ನಷ್ಟ ಮತ್ತು ವೃಥಾ ವೆಚ್ಚಗಳನ್ನು ಎದುರಿಸಬೇಕಾಗಿಲ್ಲ. ಸ್ಥಿರಾಸ್ತಿ-ಚರಾಸ್ತಿಗಳನ್ನು ಮೂವರ ಜಂಟಿ ಹೆಸರಿನಲ್ಲಿ ನೋಂದಾಯಿಸಿದರೆ ಭವಿಷ್ಯದಲ್ಲಿ ಉಂಟಾಗುವ ಎಲ್ಲಾ ತೊಡಕುಗಳನನು ನಿವಾರಿಸಿಕೊಳ್ಳಬಹುದು. ಒಂದು ಮಗುವಿನ ಕುಟುಂಬದ ಆಸ್ತಿ ಮುಂದಿನ ಪೀಳಿಗೆಗಳಲ್ಲಿ ದ್ವಿಗುಣಗೊಳ್ಳುವುದು ನಿಶ್ಚಿತ.

**ಸಮಾಜದ ಒಳಿತಿಗಾಗಿ :** ಜನಸಂಖ್ಯೆಯಲ್ಲಿ ಗಣನೀಯ ಇಳಿಮುಖವಾಗಿ, ಪರಿಸರ ಮಾಲಿನ್ಯ ಕಡಿಮೆಯಾಗಿ, ಪ್ರತಿಯೊಬ್ಬರಿಗೂ ಶುದ್ಧಗಾಳಿ ದೊರೆತು ಆರೋಗ್ಯ ವೃದ್ಧಿಸುವುದು ಖಂಡಿತ. *ದೌರ್ಬಲ್ಯಯುಕ್ತ ಮಗುವಿನ ಜನನಪ್ರಮಾಣದಲ್ಲಿ ಅಸಾಧರಣ ಇಳಿಕೆ ಕಂಡು ಬರುತ್ತದೆ. *ಪ್ರತೀ ತಾಯಿಯು ತನಗೆ ಹುಟ್ಟುವ ಏಕೈಕ ಮಗುವಿಗೆ ಎದೆಹಾಲು ಉಣಿಸುವುದರಿಂದ ಮಗುವಿನ ದೈಹಿಕ, ಮಾನಸಿಕ ಹಾಗೂ ಭಾವನಾತ್ಮಕ ಬೆಳವಣಿಗೆ ಉನ್ನತ ಮಟ್ಟದ್ದಾಗಿರುತ್ತದೆ. *ಮಾನವೀಯತಾ ಮೌಲ್ಯಗಳು ಹೆಚ್ಚಾಗಿ, ದುಷ್ಕೃತ್ಯಗಳು ಕಡಿಮೆಯಾಗುತ್ತವೆ. *ಗಾಬರಿಗೊಳ್ಳುವಷ್ಟು ಕಡಿಮೆಯಾಗುತ್ತಿರುವ ಹೆಣ್ಣುಮಗುವಿನ ಜನನ ಪ್ರಮಾಣ ಮತ್ತೆ ತಹಬಂದಿಗೆ ಬರುತ್ತದೆ. *ಅಕ್ಷರತೆಯಿಂದಾಗ ಜ್ಞಾನವಂತ ರಚನಾತ್ಮಕ ಹಾಗು ವೈಜ್ಞಾನಿಕ ಸಮಾಜದ ಉದಯವಾಗುತ್ತದೆ. *ಸಮಾಜ ಸೇವೆ ಸಂಬಂಧಿತ ಕಾರ್ಯ ಚಟುವಟಿಕೆಗಳು ಹೆಚ್ಚುತ್ತವೆ. ಸಮಾಜವನ್ನು ಪೀಡಿಸುತ್ತಿರುವ ಬಾಲಕಾರ್ಮಿಕ, ಬಾಲ್ಯವಿವಾಹ, ಭಿಕ್ಷಾಟನೆ, ಇದೇ ಮೊದಲಾದುವುಗಳು ನಿಃಶ್ಯೇಷವಾಗುತ್ತವೆ. *ಹಸಿವು, ಬಡತನ, ಅವಮಾನ, ಕುಟುಂಬ ಆತ್ಮಹತ್ಯೆಗೆ ಅಂಟಿರುವ ಕಳಂಕ ಇವೆಲ್ಲವೂ ಹೇಳಹೆಸರಿಲ್ಲದಂತೆ ನಿರ್ನಾಮವಾಗುತ್ತವೆ. ಬಡತನ/ಹಸಿವು ಸಂಬಂಧಿತ ಬಲವಂತದ ವೇಶ್ಯಾವೃತ್ತಿ / ಬಲತ್ಕಾರ ಇತ್ಯಾದಿ ಕ್ರೂರ ಅನಿಷ್ಟಗಳು ಸಮಾಜದಿಂದ ದೂರವಾಗುತ್ತವೆ.

**ಉತ್ತಮ ಆರೋಗ್ಯ ಹಾಗೂ ಆನಂದಕ್ಕಾಗಿ :** *ಚಿಕ್ಕ ಕುಟುಂಬ - ಆರೋಗ್ಯಕರ ಕುಟುಂಬ, ಏಕೆಂದರೆ ಆ ಕುಟುಂಬಕ್ಕೆ ಸಾಂಕ್ರಾಮಿಕ ರೋಗಗಳ ಬಾಧೆ ಕಡಿಮೆ *ಪ್ರಾಸ ಮೊದಲಾದ ಮನರಂಜನೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಕಡಿಮೆ ಅವಧಿಯಲ್ಲಿ ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆ. *ಆರ್ಥಿಕ ಸುಭದ್ರತೆ - ಮನ ನಿಶ್ಚಿಂತೆ, ಇಹದೇಗಾಗಿ ಮನಕ್ಕೆ ಮುದನೀಡುವ ಹೆಚ್ಚು ಹೆಚ್ಚು ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬಹುದು.

**ಆರ್ಥಿಕ ಭದ್ರತೆಗೆ :** *ಒಂದು ಮಗುವಿನ ಕುಟುಂಬಕ್ಕೆ ಆರ್ಥಿಕ ಪ್ರಯೋಜನಗಳು ಹಲವಾರು. *ಕಡಿಮೆ ಖರ್ಚು ಮತ್ತು ಹೆಚ್ಚು ಉಳಿತಾಯ. *ನಿಜವಾದ ಆರ್ಥಿಕ ಮತ್ತು ಮಾನಸಿಕ ಸ್ವಾತಂತ್ರ್ಯ ನಿಮ್ಮದಾಗುತ್ತದೆ. *ಪ್ರೀತಿ-ವಿಶ್ವಾಸಗಳು ನಿಮ್ಮ ಮನೆಯಲ್ಲಿ ತುಂಬಿತುಳುಕಾಡುತ್ತದೆ. *ದೊಡ್ಡ ಕುಟುಂಬಗಳಿಗೆ ಹೋಲಿಸಿದರೆ, ಚಿಕ್ಕ ಕುಟುಂಬಕ್ಕೆ ಪ್ರಯಾಣ ಮತ್ತು ವಿಷಯ ರವಾನೆಯಲ್ಲಿ ಕಡಿಮೆ ವೆಚ್ಚ ತಗುಲುತ್ತದೆ. *ಸಂಸಾರ ರಥವನ್ನು ನಡೆಸುತ್ತಿರುವ ವ್ಯಕ್ತಿ ಹೆಚ್ಚಿನ ಅವಧಿಗೆ, ಹೆಚ್ಚಿನ ಮೊತ್ತಕ್ಕೆ ವಿಮೆ ಮಾಡಿ, ಏನಾದರೂ ಅಪಘಾತ ಸಂಭವಿಸಿದಲ್ಲಿ ಆ ಮೊತ್ತವೇ ಇನ್ನುಳಿದಿಬ್ಬರ ಜೀವನೋಪಯೋಗಕ್ಕೆ ಸಾಕಾಗುತ್ತದೆ.

**ದೇಶದ ಉನ್ನದಿಗಾಗಿ :** *ಜನಸಂಖ್ಯೆಯ ದಟ್ಟಣೆ ಕಡಿಮೆಯಾಗಿ ಪ್ರತಿಯೊಬ್ಬರ ನಡುವೆ ಸೋದರ ಭಾವನೆ ಏರ್ಪಡುತ್ತದೆ. ***"ವಸದೈವ ಕುಟುಂಬಕಂ"** ಎನ್ನುವಂತೆ ಎಲ್ಲರೂ ಸೌಹಾರ್ದಯುತ ಸಹಬಾಳ್ವೆ ನಡೆಸಬಹುದು. *ಯಾವುದೇ ಸರ್ಕಾರ ಕುಟುಂಬ ಯೋಜನೆಯ ಮೇಲೆ ಕೊಟ್ಯಾಂತರ ರೂಪಾಯಿ ವೆಚ್ಚ ಮಾಡುವ ಅಗತ್ಯವೇ ಇರುವುದಿಲ್ಲ. *ಸಂಪನ್ಮೂಲಗಳಾದಂಥಹ ವಿದ್ಯಾಭ್ಯಾಸ, ಆರೋಗ್ಯ ಮತ್ತು ಅಪರಾಧಗಳ ಹತೋಟಿ ಮುಂತಾದುವುಗಳ ಮೇಲಿನ ವೆಚ್ಚ ಕಡಿಮೆಯಾಗುತ್ತದೆ. ಇದೇ ಹಣವನ್ನು ಇತರೆ ಅಬಿವೃದ್ಧಿ ಕಾರ್ಯಗಳಿಗೆ ಬಳಸಬಹುದು.

**ಇಡೀ ವಿಶ್ವದ ಒಳಿತಿಗಾಗಿ :** *ಹೆಚ್ಚಿನ ಹೊರೆಯಿಲ್ಲದೆ ಮತ್ತು ಕಾಡುವ ಸಮಸ್ಯೆಗಳಿಲ್ಲದ ಒಂದು ಮಗುವಿನ ಸವಿಕುಟುಂಬ-ಆನಂದಮಯ ಕುಟುಂಬ ಪ್ರಪಂಚದ ಜನಸಂಖ್ಯಾಸ್ಫೋಟಕ್ಕೆ ಕಡಿವಾಣ ಹಾಕಿ, ವಿಶ್ವಸಾಂತಿಯ ಕನಸನ್ನು ನನಸಾಗಿ ಮಾಡುತ್ತದೆ. *ವಿಶ್ವದ ಉನ್ನತಿಗೆ ಭದ್ರಬುನಾದಿಯನ್ನು ಹಾಕುತ್ತದೆ.

**ಸಂಸ್ಥಾಪಕರು : ಶ್ರೀ ಕೆ.ಕೆ. ಮೂರ್ತಿ,** ವ್ಯವಸ್ಥಾಪಕರು : **ಶ್ರೀಮತಿ ಪ್ರಮೀಳ,** ಹೆಚ್ಚಿನ ವಿವರಗಳಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ: **ಶ್ರೀ ಮಿಷನ್,** ಸಂಖ್ಯೆ - 1097, 7ನೇ ಬ್ಲಾಕ್, ಹೆಚ್.ಎಂ.ಟಿ. ಬಡಾವಣೆ, ವಿದ್ಯಾರಣ್ಯಪುರ, ಬೆಂಗಳೂರು - 560 097, ಫೋನ್ ನಂ. 91-80-23641839. E-mail : info@srimission.org Web : www.srimission.org

ಡಿ. ಲೋಕನಾಥ

*With Best Compliments From :*

ಪುಷ್ಪಾಂಜಲಿ ಎಂಟರ್‌ಪ್ರೈಸ್

**PUSHPANJALI ENTERPRISE**

ಫೋನ್ : 23127967, 23421764
ಮೊಬೈಲ್ : 98452 - 64367

* LETTERPRESS, * OFFSET, * SCREEN PRINTING, * BINDING AND * STATIONERY

No. 33, 6th 'A' Main, Maruthi Extension, Gayathrinagar, Bangalore - 560 021.